

‘ದಿ ಷೀಲ್ಡ್’
ಹೆಸರಿನ ಕಲಾಕೃತಿ

ಮಗ್ಗುಲಿನಂತೆ ಕಾಣಿಸುವ ಚಿತ್ರ ಸರಣಿಯಿದೆ. ಮೊಗ್ಗಿನ ಜಡೆಗಳ ಸರಣಿಯಲ್ಲಿ ಮಗುವಾಗಿದ್ದಾಗ, ಹೆಣ್ಣಾದ ಗಳಿಗೆಯ, ಮದುವೆ ಮತ್ತು ಸೀಮಂತದಲ್ಲಿ ಮೊಗ್ಗಿನ ಜಡೆ ಹಾಕಿಕೊಂಡ ಹೆಣ್ಣುಮಕ್ಕಳ ಹಲವಾರು ಚಿತ್ರಗಳಿವೆ. ಹೆಣ್ಣಿನ ಅವಸ್ಥಾಂತರಗಳ ಘಟ್ಟಗಳು ಎಷ್ಟೊಂದು ಕಥೆಗಳನ್ನು ಹೇಳುತ್ತವೆ? ಮುಗ್ಧ ಮಗುವಿನಿಂದ, ಮೈನೆರೆಯುವ ಆತಂಕ, ಇದು ತನ್ನ ವ್ಯಕ್ತಿತ್ವದ ಅನಾವರಣವೆ? ಶಕ್ತಿಯೆ? ಮಿತಿಯೆ? ಅನನ್ಯತೆಯೆ? ಈ ಎಲ್ಲವುಗಳಿಂದ ಸಂತೆಯಾದ ಮನಸ್ಥಿತಿ, ಅದರಲ್ಲೂ ನಗುವ ಪ್ರಯತ್ನ. ಮುಂದಿನದು ಮದುವೆಯೆನ್ನುವ ಏಳುಬಣ್ಣದ ಕಾಮನಬಿಲ್ಲು ಮತ್ತು ಒಳಹೋದಷ್ಟು ಸಲೀಸಾಗಿ ಹೊರಬರಲಾರದ ಚಕ್ರವ್ಯೂಹ. ಅದರಲ್ಲೆಲ್ಲ ನನ್ನ ಮನಸ್ಸಿನಲ್ಲಿ ಥಟ್ ಎಂದು ಬಂದು ಆಸೀನಳಾದ ಒಬ್ಬ ಹೆಣ್ಣುಮಗಳು. ಸೌಂದರ್ಯದ ದೈಹಿಕ ವಿವರಗಳಲ್ಲಿ ಸುಂದರಿಯೆಂದು ಕರೆಯಲಾಗದ, ಆದರೆ ಆತ್ಮಸೌಂದರ್ಯದಲ್ಲಿ, ಆತ್ಮಾಭಿಮಾನದಲ್ಲಿ ಲೋಕವನ್ನು–ಬದುಕನ್ನು ಗೆಲ್ಲಬಲ್ಲೆನೆನ್ನುವ ಧರ್ತಿಯಲ್ಲಿ ತಲೆಯೆತ್ತಿ ನಿಂತ, ಬಹುಶಃ ಕೆಳಮಧ್ಯಮವರ್ಗದ, ಕೆಳಜಾತಿಯವಳೆಂದು ಹೇಳಬಹುದಾದ ಹೆಣ್ಣು. ಯಾವ ಮಹಾರಾಣಿಗೂ ಕಡಿಮೆಯಿಲ್ಲದ ಅವಳ ಗತ್ತು ಗೈರತ್ತು ಹೆಣ್ಣು ಎಂದರೆ ಹೀಗಿರಬೇಕು ಎನ್ನುವ ಪ್ರೀತಿ ಉಕ್ಕುವಷ್ಟು ಇದೆ. ಅದೆಷ್ಟು ಮುಖಭಾವಗಳು, ಅಷ್ಟೂ ಹೆಣ್ಣಿನ ಬದುಕಿನಲ್ಲಿ ದತ್ತವಾದ ವಿನ್ಯಾಸಗಳು.

ಕಲೆಯನ್ನು ಅನುಕರಿಸುತ್ತಿರುವ ಕಲಾವಿದೆ ಎನ್ನುವ ವ್ಯಾಖ್ಯಾನದ ಎರಡು ಚಿತ್ರಗಳು, ಮಲಗಿರುವ ಕಲ್ಲಿನ ಪ್ರತಿಮೆಯನ್ನು ಅನುಕರಿಸಿ ಮಲಗಿರುವ ಕಲಾವಿದೆಯದ್ದು. ಆ ಕಲ್ಲು ಕಲ್ಲು, ಕಲೆ, ಇತಿಹಾಸ ಎಲ್ಲವೂ ಹೌದು.

ಶ್ರೀಲಂಕಾದ ಫೋಟೊಗಳು ಕೊಡುವ ಅನುಭೂತಿ ಆಧುನಿಕ ಜಗತ್ತಿನದ್ದು ಮಾತ್ರವಲ್ಲ, ಮಾನವರ ಆದಿಮ ತಳಮಳ ಮತ್ತು ಹೋರಾಟದ್ದು. ಶ್ರೀಲಂಕಾದಲ್ಲಿ ಮೇರೆಯರಿಯದ ಹಿಂಸೆ ಮತ್ತು ಹೆಜ್ಜೆಗೊಂದರಂತೆ ಎನ್ನಿಸುವ ಬುದ್ಧನ ವಿಗ್ರಹಗಳು. ಹಿಂಸೆ ಮತ್ತು ಅಹಿಂಸೆಯ ನಡುವೆ ಅಹಿಂಸೆಯನ್ನು ತನ್ನ ಬದುಕಿನ ದಾರಿಯಾಗಿ ಎಂದೂ ಒಳಗಾಗಿಸಿಕೊಳ್ಳಲಾಗದ, ಅಹಿಂಸೆ ಎನ್ನುವುದು ನಿರಂತರ ಕನವರಿಕೆಯಾಗಿ ಉಳಿದಿರುವ ದುರಂತ ವಾಸ್ತವವನ್ನು ಇಲ್ಲಿನ ಚಿತ್ರಗಳು ವಿಷಾದದಲ್ಲೆಂಬಂತೆ ಮತ್ತೆ ಮತ್ತೆ ಹಿಡಿಯಲೆತ್ನಿಸುತ್ತವೆ. ಇಲ್ಲಿ ಪ್ರದರ್ಶಿತವಾಗದ ವಿಡಿಯೋ ಒಂದರಲ್ಲಿ ಸುರೇಖಾ ಹಿಂದೆ ಹಿಂದೆ ಸರಿಯುತ್ತಲೇ ಹೋಗುವ ಬುದ್ಧ, ನಿಂತಲ್ಲೇ ನಿಂತಿರುವ, ಕೂತಲ್ಲೇ ಕೂತಿರುವ ಮನುಷ್ಯರನ್ನು ಚಿತ್ರಿಸುತ್ತಾರೆ. ಒಂದು ಕಾಲಕ್ಕೆ ಶ್ರೀಲಂಕಾವನ್ನು ಕಾಡಿದ ಹಿಂಸೆ ಇಂದು ಸಾಂಕ್ರಾಮಿಕ ರೋಗದಂತೆ ಜಗತ್ತನ್ನೇ ಆವರಿಸಿರುವಾಗ ಈ ಚಿತ್ರಗಳು ವರ್ತಮಾನಕ್ಕೆ ಹಿಡಿದ ಕನ್ನಡಿಯಂತೆ ಕಾಣಿಸುತ್ತವೆ. ಪಾಪಿಯಾ ಎನ್ನುವ ಹೂವಿನ್ನು ಆಧರಿಸಿದ ಹೂವಿನ ಹಾಸಿಗೆಯಂತೆ ಕಾಣಿಸುವ ಕಲಾಕೃತಿಯೊಂದಿದೆ. ಇದು ನವೆಂಬರ್ ಹನ್ನೊಂದರಂದು ಲಂಡನ್‌ನಲ್ಲಿ ಆಚರಿಸುವ ಹುತಾತ್ಮರ ದಿನಾಚರಣೆಯಲ್ಲಿ ಬಳಸುವ ಹೂವುಗಳ ಕೃತಿ ಎನ್ನುವುದು ನಮ್ಮನ್ನು ದಿಗ್ಭ್ರಮೆಗೊಳಿಸುತ್ತದೆ. ಹೂವಿನ ಚೆಲುವೋ, ರಕ್ತವನ್ನು ಹೋಲುವ ಆ ಹೂವುಗಳ ಕಂದು ಕೆಂಪೋ – ಎರಡೂ ನಮ್ಮ ಬದುಕಿನ ಕಟು ವಾಸ್ತವವೇ ಆಗಿರುವಾಗ ಇದಕ್ಕೆ ಪ್ರತಿಕ್ರಿಯಿಸುವುದು ಹೇಗೆ? ತಾನೇ ಮೂಲವಾಗಿ ಹಿಂಸೆಯನ್ನು ಅದರೆಲ್ಲ ಸಾಧ್ಯತೆಗಳಲ್ಲಿ ಶೋಧಿಸಿ, ಪ್ರಯೋಗಿಸಿ ಮಾನವ ಕುಲವನ್ನೇ ಹಿಂಸ್ರ ಪಶುವಾಗಿಸುವುದು ಒಂದು ಕಡೆ, ಅದಕ್ಕೆ ಪರಿತಾಪ ಪಡುವ ಹುಲು ಮಾನವರ ಪಾಡು ಇನ್ನೊಂದು ಕಡೆ... ಕೊನೆಗೂ ಮಾನವನೆಂದರೆ ನಿರಂತರವಾಗಿ ತಪ್ಪು ದಾರಿಯಲ್ಲೇ ನಡೆಯುವ, ನಿರಂತರವಾಗಿ ಆ ದಾರಿಯನ್ನು ಬಿಟ್ಟುಬಿಡುವ ಪ್ರತಿಜ್ಞೆ ಮಾಡುವ ದುರ್ಬಲ ಪ್ರಾಣಿ.



ಸುರೇಖಾ ಅವರ ಒಂದು ಇನ್‌ಸ್ಟಾಲೇಷನ್

ಈ ಯಾವ ಕಲಾಕೃತಿಯಲ್ಲೂ ಸಿನಿಕತನದ, ನಿರಾಸೆಯ ಛಾಯೆಯೂ ಇಲ್ಲ ಎನ್ನುವುದು ಸುರೇಖಾ ಅವರು ಮನುಷ್ಯ ಚೈತನ್ಯದ ಮೇಲೆ ಇಟ್ಟಿರುವ ನಂಬಿಕೆಯಿಂದ ಹುಟ್ಟಿದ್ದಿರಬೇಕು. ನಮ್ಮ ನಡುವಿನ ಈ ಮಹತ್ವದ ಕಲಾವಿದೆಗೆ ಅಭಿನಂದನೆಗಳು ಮತ್ತು ಪ್ರೀತಿ.

ಪ್ರತಿಕ್ರಿಯಿಸಿ: feedback@sudha.co.in